# ಪಾಲಕರ ಠರಾವು ಮತ್ತು ಮಕ್ಕಳ ಮುಕ್ತ ನಿಲುವು



**ಮಕ್ಕಳ ಇಷ್ಟಕಷ್ಟಗಳಿಗೆ ಸಂಬಂಧಿಸಿದಂತೆ ಹಿರಿಯರು ತೆಗೆದುಕೊಳ್ಳುವ ತೀರ್ಮಾನಗಳು, ಕೆಲವು ಸಂದರ್ಭಗಳಲ್ಲಿ ಎಳೆಯರ ಆಯ್ಕೆಗಳನ್ನೇ ಮೊಟಕುಗೊಳಿಸಿಬಿಡುತ್ತವೆ.**

■ ಸ್ವಯಂಪ್ರಭಾ

ಶಿವಾಂಗಿ ಮತ್ತು ಅವಳ ಅಮ್ಮ ಬೆಂಗಳೂರಿನಲ್ಲಿರುವ ಅತ್ತೆ ಮನೆಗೆ ಹೋಗುವ ಪ್ಲಾನ್ ಸಿದ್ಧಪಡಿಸಿ ಆಯಿತು. ಒಂದು ವಾರದ ಮಟ್ಟಿಗೆ ಅತ್ತೆ ಮನೆಯಲ್ಲಿದ್ದು ಮತ್ತೆ ವಾಪಸ್ಸಾಗುವುದು ಎಂಬ ಸುದ್ದಿಯೇ ಮೂರನೇ ತರಗತಿಯಲ್ಲಿ ಓದುವ ಶಿವಾಂಗಿ ಮನದಲ್ಲಿ ಹುಮ್ಮಸ್ಸು ಮೂಡಿಸಿತ್ತು. ಅಲ್ಲಿ ಅಕ್ಕನ ಜೊತೆಗೆ ಐಸ್‌ಕ್ರೀಮ್ ತಿನ್ನಬೇಕು, ಒಂದು ಸಿನಿಮಾ ನೋಡಬೇಕು, ಪ್ಲಾನೆಟೋರಿಯಂ ನೋಡಬೇಕು... ಹೀಗೆ ಪುಟಾಣಿಯ ಮನಸ್ಸಿನಲ್ಲಿ ನೂರೆಂಟು ಕನಸು.

ಕಾರಿನಲ್ಲಿ ಕುಳಿತ ಶಿವಾಂಗಿಯ ಅಮ್ಮ ತಮ್ಮ ಅತ್ತೆಗೆ ಫೋನ್ ಮಾಡಿ, 'ಹೊರಟಿದ್ದೇವೆ' ಎಂದರು. 'ಬನ್ನಿ, ಬನ್ನಿ. ಶಿವಾಂಗಿಗೆ ಹೊಸ ಸ್ನೇಹಿತರೊಬ್ಬರು ನಮ್ಮ ಮನೆಯಲ್ಲಿದ್ದಾರೆ' ಎನ್ನುತ್ತ ಅತ್ತೆ ತಮ್ಮ ಮನೆಗೆ ಬಂದಿರುವ ಹೊಸ ಬೆಕ್ಕಿನ ಮರಿಯ ಬಗ್ಗೆ ಹೇಳಿದರು. ಶಿವಾಂಗಿ ಅಮ್ಮನಿಗೆ ಆಕಾಶವೇ ಕಳಚಿಬಿದ್ದಂತಾಯಿತು. 'ಅಯ್ಯೋ, ನಮ್ಮ ಪುಟ್ಟಿಗೆ ಬೆಕ್ಕು ಕಂಡರಾಗಲ್ಲ. ಈಗೇನು ಮಾಡೋದು? ಒಂದು ವಾರ ಉಳಿಯುವುದು ಕಷ್ಟವಾದೀತು' ಎನ್ನುತ್ತ ಬೇಸರ ಮಾಡಿಕೊಂಡರು.

ಸಂಜೆ ಮನೆ ತಲುಪಿದ ಕೂಡಲೇ ಬಾಲ್ಕನಿಯಲ್ಲಿರುವ ಬೆಕ್ಕು ನೋಡಿದ ಶಿವಾಂಗಿ, ಗಾಜಿನ ಬಾಗಿಲೆಳೆದುಬಿಟ್ಟಳು. ಆದರೆ ಕುತೂಹಲದಿಂದ ಗಾಜಿನ ಮೂಲಕವೇ ಪುಟ್ಟ ಬೆಕ್ಕನ್ನು ತದೇಕ ಚಿತ್ತದಿಂದ ನೋಡಲಾರಂಭಿಸಿದಳು.

ಬಾಲ್ಕನಿಯಲ್ಲಿ ಆ ಬೆಳ್ಳನೆಯ ಮರಿಬೆಕ್ಕು ತನ್ನ ಬಾಲವನ್ನು ಅರಳಿಸಿಕೊಂಡು, ಮೊಲದ ಮರಿಯಂತೆ ಚೆಂಗನೆ ಜಿಗಿಯುತ್ತ ಆಟವಾಡುತ್ತಾ ಇತ್ತು. 'ಅರೆ, ಬೆಕ್ಕೆಂದರೆ, ಮ್ಯಾಂವ್ ಎನ್ನುತ್ತ ಕರ್ಕಶ ಸದ್ದು ಮಾಡುತ್ತದಲ್ಲವಾ? ಪಕ್ಕದ ಮನೆಯಲ್ಲಿ ಜಗಳವಾಡುವ ಹುಲಿಯಂತಹ ಬೆಕ್ಕನ್ನಷ್ಟೇ ನೋಡಿದ್ದೆ. ಇದು ಬೆಕ್ಕಿನ ಹಾಗೆಯೇ ಇಲ್ವಲ್ಲ ಅತ್ತೆ' ಎನ್ನುತ್ತ ಶಿವಾಂಗಿ ಕಣ್ಣನ್ನು ಗಾಜಿನ ಬಾಗಿಲಿಗೆ ಅಂಟಿಸಿಕೊಂಡು ನಿಂತಿದ್ದಳು.

ಬೆಕ್ಕು ಹೀಗೆ ಸುಂದರವಾಗಿ ಆಟವಾಡಬಹುದು, ಸುಸ್ಸೂ ಬಂದಾಗ ಅದಕ್ಕೆಂದೇ ನಿಗದಿಪಡಿಸಿದ ಡಬ್ಬದೊಳಗೆ ಹೋಗಿ ಸುಸ್ಸೂ ಮಾಡಬಹುದು ಎಂಬ ಕಲ್ಪನೆಯೇ ಶಿವಾಂಗಿ ಪುಟ್ಟಿಗೆ ಇರಲಿಲ್ಲ. ಎರಡು ಮೂರು ದಿನಗಳಲ್ಲಿ ಶಿವಾಂಗಿ ಕೇಳಿದಳು, 'ಬೆಂಗಳೂರಲ್ಲಿ ಹೀಗೆ ಬುದ್ಧಿ ಇರುವ ಚಂದದ ಬೆಕ್ಕ ಸಿಗುತ್ತಾ ಅಮ್ಮಾ ನಂಗೊಂದು ಬೇಕು ಅಂತ ಅತ್ತೆಗೆ ಹೇಳ್ತೀಯಾ'

ಬಹಳಷ್ಟು ಸಂದರ್ಭಗಳಲ್ಲಿ ಮಕ್ಕಳ ಆರಂಭಿಕ ಗ್ರಹಿಕೆ ಬಹಳ ಸೀಮಿತವಾಗಿರುತ್ತದೆ. ಅಪಾರ ವೈವಿಧ್ಯವನ್ನು ನೋಡುವ ಅವಕಾಶಗಳೇ ಅವರಿಗೆ ಲಭ್ಯವಾಗಿರುವುದಿಲ್ಲ. ಸೀಮಿತ ಅವಕಾಶದಲ್ಲಿ ಅವರು ಮಾಡುವ ನಿರ್ಧಾರಗಳು ನಂತರದ ದಿನಗಳಲ್ಲಿ ಬದಲಾಗಬಹುದು. ಆದರೆ ಇಂತಹ ಸಂದರ್ಭದಲ್ಲಿ ಸಮಸ್ಯೆ ಎದುರಾಗುವುದು ಪಾಲಕರ ಕಡೆಯಿಂದ.

ಅಯ್ಯೋ, ನನ್ನ ಮಗನಿಗೆ ನಾಯಿ ಕಂಡರಾಗಲ್ಲ, ಅವಳಿಗೆ ಕನ್ನಡ ಹಾಡೆಂದರೆ ಚೂರೂ ಹಿಡಿಸಲ್ಲ, ಪುಟ್ಟಿಗೆ ಇಡ್ಲಿ ಸೇರುವುದಿಲ್ಲ ಹೀಗೆ ಅಮ್ಮಂದಿರು ಮೊದಲೇ ಘೋಷಣೆ ಮಾಡಿಬಿಡುತ್ತಾರೆ. ಮಕ್ಕಳೋ, ಮನೆಯಲ್ಲಿ ತಾವು ಜಾರಿಮಾಡಿಕೊಂಡ ಠರಾವುಗಳನ್ನು ಸ್ವಲ್ಪ ಬದಲಾಯಿಸುವ ಯೋಚನೆಯಲ್ಲಿದ್ದರೂ, ಅಮ್ಮ ಅಥವಾ ಅಪ್ಪ ನೀಡುವ ಇಂತಹ ತೀರ್ಪುಗಳಿಂದ, ಹೊಸದನ್ನು ಕಲಿಯುವ, ನೋಡುವ, ಪ್ರಯತ್ನಿಸುವ ಅವಕಾಶಗಳಿಂದ ವಂಚಿತರಾಗಿಬಿಡುತ್ತಾರೆ.

ಆಹಾರದ ವಿಷಯದಲ್ಲಂತೂ ಅಪ್ಪ ಅಮ್ಮಂದಿರು ತೀರ್ಪು ನೀಡುವ ಶೈಲಿಯಲ್ಲಿ ಮಾತನಾಡುವುದರಿಂದ ಮಕ್ಕಳ ಬೆಳವಣಿಗೆಗೇ ತೊಂದರೆಯಾಗುತ್ತದೆ. ಮನೆಯಲ್ಲಿ ಬದನೆಕಾಯಿ ಕಂಡರೆ ಮಾರು ದೂರ ಓಡುವ ಪುಟ್ಟಣ್ಣ, ನೆಂಟರ ಮನೆಯಲ್ಲಿ ಬದನೆ ಪಲ್ಯದ ರುಚಿ ನೋಡಿ ಇಷ್ಟಪಡಬಹುದು. ಹಾಗೆ ನೋಡಿದರೆ, ಬದನೆಯ ಬಗೆಗಿರುವ ಪೂರ್ವಗ್ರಹವನ್ನು ಹೋಗಲಾಡಿಸಲು ಇಂತಹ ಅವಕಾಶಗಳು ನೆರವಾಗಬಹುದು. ಬಂಧುಗಳ ಮನೆಯಲ್ಲಿ ಅಡುಗೆಯ ಶೈಲಿಯೂ ವಿಭಿನ್ನವಾಗಿ ಇರುತ್ತದಲ್ಲ!

ಮಕ್ಕಳಿಗೆ ಏನು ಇಷ್ಟ, ಏನು ಕಷ್ಟ ಎಂದು ಯಾವುದೋ ಸಮಯದಲ್ಲಿ ಮಾಡುವ ನಿರ್ಣಯಗಳು ಜೀವನಪರ್ಯಂತ ಜಾರಿಯಲ್ಲಿ ಇರಬೇಕಾದವುಗಳಲ್ಲ. ಅವುಗಳು ಬದಲಾಗಬಹುದು, ಅಥವಾ ಬದಲಾಗದೆಯೂ ಇರಬಹುದು. ಆದರೆ. ಬದಲಾವಣೆಗಾಗಿ ಮಕ್ಕಳ ಮುಂದೆ ಅವಕಾಶಗಳು ಎದುರಾದಾಗ, ಅಪ್ಪ ಅಮ್ಮ ತೀರ್ಪುಗಾರರಂತೆ ಅಡಚಣೆಯಾಗಿ ನಿಲ್ಲಬಾರದು. ಅಮ್ಮನಿಗೆ ಎಲ್ಲಿ ಬೇಸರವಾಗುತ್ತದೋ ಎಂಬ ದಾಕ್ಷಿಣ್ಯ ಭಾವವು ಮಗುವಿನ ಮನಸ್ಸನ್ನು ಕಟ್ಟಿ ಹಾಕಬಾರದು. ಅಷ್ಟರ ಮಟ್ಟಿಗಿನ ಮುಕ್ತ ನಡವಳಿಕೆಯನ್ನು ಪೋಷಕರು ಹೊಂದಿರಬೇಕು.

'ನಾನು ಮಾಡುವ ಉದ್ದಿನ ದೋಸೆ ನಿಂಗೆ ಇಷ್ಟವಾಗುವುದಿಲ್ಲ ಅಲ್ವ. ಈ ಆಂಟಿ ಡಿಫರೆಂಟ್ ಆಗಿ ದೋಸೆ ಮಾಡ್ತಾರೆ. ನೀನು ತಿಂದು ನೋಡು, ನಿಂಗೆ ಇಷ್ಟವಾದರೆ ಅವರ ಬಳಿ ನಾನೂ ಹೊಸ ವಿಧಾನ ಕಲಿತುಕೊಳ್ಳುತ್ತೇನೆ' ಎನ್ನುವಂತಹ ಎಂಬ ಮಾತುಗಳು ಮಗುವಿನ ಮನಸ್ಸನ್ನು ಹೊಸತನದತ್ತ ಹೊರಳಿಸಬಲ್ಲುದು.

ಎಲ್ಲ ಮಕ್ಕಳೂ ಬದಲಾವಣೆಯನ್ನು ಅಪೇಕ್ಷೆ ಪಡುತ್ತಾರೆ ಎನ್ನುವಂತಿಲ್ಲ. ಬದಲಾವಣೆಗಳತ್ತ ಮುಖಮಾಡುವ ಮಕ್ಕಳಿಗೆ ಅವಕಾಶಗಳು ಮುಕ್ತವಾಗಿರಲಿ. ಪೋಷಕರ ತೀರ್ಮಾನಗಳು ಅವರ ಮನಸ್ಸನ್ನು ಮುದುಡಿಸದೇ ಇರಲಿ.

ಪ್ರತಿಕ್ರಿಯಿಸಿ: **feedback@sudha.co.in**